# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 181 |
| 2 | ಸದಸ್ಯರ ಹೆಸರು | ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| 3 | ವಿಷಯ | ರೇಷ್ಮೆ ಬೆಳೆಗಾರರ ಬಗ್ಗೆ |
| 4 | ಉತ್ತರಿಸುವ ದಿನಾಂಕ | 10-12-2018 |
| 5 | ಉತ್ತರಿಸುವವರು | ಮಾನ್ಯ ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು |
| | ಪ್ರಶ್ನೆಗಳು | ಉತ್ತರಗಳು |
| ಅ | ರಾಜ್ಯದಲ್ಲಿ ರೇಷ್ಮೆ ಬೆಳೆಗಳನ್ನು ಎಷ್ಟು . ಎಕರೆಯಲ್ಲಿ ಬೆಳೆಯ ಲಾಗುತ್ತಿದೆ (ಜಿಲ್ಲಾವಾರು ಮಾಹಿತಿ ನೀಡುವುದು): | ರಾಜ್ಯದಲ್ಲಿ 2018-19ನೇ ಸಾಲಿನ ಅಕ್ಟೋಬರ್-2018ರ ಅಂತ್ಯಕ್ಕೆ 262409.35 ಎಕರೆ ಪ್ರದೇಶದಲ್ಲಿ ಹಿಪ್ಪುನೇರಳೆ ವಿಸ್ತೀರ್ಣವಿದೆ. ಜಿಲ್ಲಾವಾರು ವಿವರವನ್ನು ಅನುಬಂಧ-1ರಲ್ಲಿ ನೀಡಿದೆ. |
| ಆ | ರೇಷ್ಮೆ ಬೆಳೆಗಾರರಿಗೆ ರಾಜ್ಯ ಸರ್ಕಾರವು ಯಾವ ಯಾವ ಅನುಕೂಲಗಳನ್ನು ನೀಡಿದೆ (ವಿವರ ನೀಡುವುದು): | ರೇಷ್ಮೆ ಕೃಷಿ ಅಭಿವೃದ್ಧಿಗಾಗಿ ಸರ್ಕಾರವು ಈ ಕೆಳಕಂಡ ಯೋಜನೆಗಳ ಮೂಲಕ ರೇಷ್ಮೆ ಬೆಳೆಗಾರರಿಗೆ ಅನುಕೂಲ ನೀಡುತ್ತಿದೆ.<br>1. ಸುಧಾರಿತ ಹಿಪ್ಪುನೇರಳೆ ತೋಟ ಬೆಳೆಯಲು, ನರ್ಸರಿ ಬೆಳೆಸಲು ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ ಒದಗಿಸಲಾಗುತ್ತಿದೆ.<br>2. ಹಿಪ್ಪುನೇರಳೆ ತೋಟಕ್ಕೆ ಟ್ರಂಚಿಂಗ್ – ಮಲ್ಚಿಂಗ್ ಮಾಡಲು ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ.<br>3. ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆಗೆ ಶೇ.90ರಷ್ಟು ಸಹಾಯಧನ.<br>4. ಹಿಪ್ಪುನೇರಳೆ ತೋಟದ ಮಣ್ಣಿನ ಫಲವತ್ತತೆಗಾಗಿ ಜೈವಿಕಗೊಬ್ಬರ ಬಳಕೆ, ಹಿಪ್ಪುನೇರಳೆ ಸೊಪ್ಪಿನ ಇಳುವರಿ ಹಾಗೂ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಸಸ್ಯ ಸಂವರ್ಧಕ ಹಾಗೂ ಬೇರು ಕೊಳೆ ನಿಯಂತ್ರಣಕ್ಕಾಗಿ ಸಹಾಯಧನ.<br>5. ಹಿಪ್ಪುನೇರಳೆ ಮರ ಕೃಷಿ ಪದ್ಧತಿ ಹಾಗೂ ಡ್ರಮ್‌ಕಿಟ್ ತಾಂತ್ರಿಕತೆಯ ಉತ್ತೇಜನಕ್ಕಾಗಿ ಸಹಾಯಧನ.<br>6. ರೇಷ್ಮೆ ಹುಳು ಸಾಕಾಣಿಕೆ ಮನೆ/ಮೌಂಟಿಂಗ್ ಹಾಲ್ ನಿರ್ಮಾಣಕ್ಕೆ ಸಹಾಯಧನ.<br>7. ಸೋಂಕು ನಿವಾರಕಗಳ ಪೂರೈಕೆ ಮತ್ತು ಸಲಕರಣೆಗಳಿಗೆ ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ.<br>8. ರೋಟರಿ ಚಂದ್ರಿಕೆಗಳ ಖರೀದಿಗೆ ಸಹಾಯಧನ<br>9. ದ್ವಿತಳಿ ಚಾಕಿ ವೆಚ್ಚಕ್ಕೆ ಸಹಾಯಧನ.<br>10. ಚಾಕಿ ಸಾಕಾಣಿಕಾ ಕೇಂದ್ರದ ಸ್ಥಾಪನೆಗೆ / ಸಲಕರಣೆಗಳಿಗೆ ಸಹಾಯಧನ.<br>11. ನೂತನ ತಾಂತ್ರಿಕತೆಗಳ ಅಳವಡಿಕೆಗೆ ರೈತರಿಗೆ ತರಬೇತಿ ಮತ್ತು ಕಾರ್ಯಾಗಾರ.<br>12. ಪಾವಗಡ ತಾಲ್ಲೂಕಿನಲ್ಲಿ ರೇಷ್ಮೆ ಗೂಡಿನ ಧಾರಣೆ ಕುಸಿತದ ಸಂದರ್ಭದಲ್ಲಿ ಒಣಗಿಸಿದ ರೇಷ್ಮೆ ಗೂಡುಗಳನ್ನು ಶೇಖರಣೆ ಮಾಡಲು ರೇಷ್ಮೆ ಗೂಡು (Cocoon Bank) ಬ್ಯಾಂಕ್ ಸ್ಥಾಪಿಸಲಾಗುತ್ತಿದೆ. |

| | | |
|---|---|---|
| | | 13. ರೇಷ್ಮೆ ಗೂಡಿನ ಧಾರಣೆ ಕುಸಿತ ಸಂದರ್ಭದಲ್ಲಿ ರೇಷ್ಮೆ ಬೆಳೆಗಾರರಿಗೆ ರಕ್ಷಣಾತ್ಮಕ ದರ ನೀಡಲಾಗುತ್ತಿದೆ.<br>14. ದ್ವಿತಳಿ ಬಿತ್ತನೆ ಬೆಳೆಗಾರರು ಹಾಗೂ ಮೈಸೂರು ಬಿತ್ತನೆ ಬೆಳೆಗಾರರು ಬೆಳೆಯುವ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ / ಬೋನಸ್ ನೀಡಲಾಗುತ್ತಿದೆ.<br><br>ರೇಷ್ಮೆ ಬಿತ್ತನೆ ಬೆಳೆಗಾರರಿಗೆ ಉತ್ಪಾದಕತೆ ಮತ್ತು ಗುಣಮಟ್ಟ ಆಧರಿಸಿ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ. |
| ಇ | ರೇಷ್ಮೆ ಗೂಡಿನ ಬೆಲೆಯು ಕುಸಿತ ಕಂಡಾಗ ರೇಷ್ಮೆ ಬೆಳೆಯುವ ರೈತರಿಗೆ ಆವರ್ತ ನಿಧಿಯನ್ನು ಸ್ಥಾಪಿಸಲು ಬೆಂಬಲ ಬೆಲೆಯನ್ನು ನೀಡಲು ಎಷ್ಟು ಅನುದಾನವನ್ನು ಒದಗಿಸ ಲಾಗಿದೆ: | ರೇಷ್ಮೆ ಗೂಡಿನ ಬೆಲೆಯು ಕುಸಿತ ಕಂಡಾಗ ರೇಷ್ಮೆ ಬೆಳೆಯುವ ರೈತರಿಗೆ ಆವರ್ತ ನಿಧಿಯನ್ನು ಸ್ಥಾಪಿಸಿರುವುದಿಲ್ಲ. ಆದರೆ 2018-19ನೇ ಸಾಲಿನಲ್ಲಿ ರೇಷ್ಮೆ ಗೂಡಿನ ಧಾರಣೆಯಲ್ಲಿ ಕುಸಿತ ಕಂಡು ಬಂದ ಹಿನ್ನಲೆಯಲ್ಲಿ ಪರಿಹಾರಕ್ಕಾಗಿ ರಕ್ಷಣಾತ್ಮಕ ದರವನ್ನು ನೀಡಲಾಗುತ್ತಿದೆ. ಇದಕ್ಕಾಗಿ ರೂ.10.00 ಕೋಟಿ ಅನುದಾನವನ್ನು ಒದಗಿಸಿಕೊಳ್ಳಲಾಗಿದೆ. |
| ಈ | ರಾಜ್ಯದಲ್ಲಿರುವ ರೇಷ್ಮೆ ಫಾರಂಗಳ ಸಂಖ್ಯೆ ಎಷ್ಟು; ಈ ಫಾರಂಗಳ ಎಷ್ಟು ಪ್ರದೇಶಗಳನ್ನು ಹೊಂದಿವೆ: (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಒಟ್ಟು 89 ರೇಷ್ಮೆ ಕೃಷಿ ಕ್ಷೇತ್ರಗಳು ಇರುತ್ತದೆ. ಇವು ಹೊಂದಿರುವ ಪ್ರದೇಶಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2ರಲ್ಲಿ ನೀಡಿದೆ. |
| ಉ | ಇದರಲ್ಲಿ ಬೀಳು ಬಿದ್ದಿರುವ ರೇಷ್ಮೆ ಫಾರಂಗಳ ಸಂಖ್ಯೆ ಎಷ್ಟು: (ಜಮೀನಿನ ವಿವರವಾದ ಮಾಹಿತಿ ನೀಡುವುದು) | ರೇಷ್ಮೆ ಇಲಾಖೆಯ ಅಧೀನದಲ್ಲಿರುವ ರೇಷ್ಮೆ ಕೃಷಿ ಕ್ಷೇತ್ರಗಳು ಬೀಳು ಬಿದ್ದಿರುವುದಿಲ್ಲ.<br>ರೇಷ್ಮೆ ಇಲಾಖೆಯ 89 ರೇಷ್ಮೆ ಕೃಷಿ ಕ್ಷೇತ್ರಗಳ ಪೈಕಿ 46 ಕೃಷಿ ಕ್ಷೇತ್ರಗಳು ಕಾರ್ಯ ನಿರ್ವಹಿಸುತ್ತಿವೆ. 43 ರೇಷ್ಮೆ ಕೃಷಿ ಕ್ಷೇತ್ರಗಳಲ್ಲಿ ನೀರಿನ ಅಭಾವವಿರುವುದರಿಂದ ಮತ್ತು ರೇಷ್ಮೆ ಇಲಾಖೆಯಲ್ಲಿ ಅಧಿಕಾರಿ/ಸಿಬ್ಬಂದಿಗಳ ಕೊರತೆಯಿಂದಾಗಿ ಕಾರ್ಯಚಟುವಟಿಕೆಗಳು ಸ್ಥಗಿತಗೊಂಡಿವೆ. |

ತೋಇ 197 ರೇಕೃವಿ 2018

(ಸಾ.ರಾ.ಮಹೇಶ್)
ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು

## ವಿಧಾನ ಪರಿಷತ್‌ನ ಪ್ರಶ್ನೆ ಸಂಖ್ಯೆ 181ಕ್ಕೆ ಅನುಬಂಧ-1

| 2018-19ನೇ ಸಾಲಿನ ಅಕ್ಟೋಬರ್-2018ರ ಅಂತ್ಯಕ್ಕೆ ಜಿಲ್ಲಾವಾರು ಹಿಪ್ಪುನೇರಳೆ ವಿಸ್ತೀರ್ಣ | | |
|---|---|---|
| ಕ್ರ ಸಂ | ಜಿಲ್ಲೆಗಳು | ವಿಸ್ತೀರ್ಣ (ಎಕರೆ) |
| 1 | ಬೆಂಗಳೂರು ಗ್ರಾಮಾಂತರ | 17343.00 |
| 2 | ಬೆಂಗಳೂರು ನಗರ | 2724.23 |
| 3 | ಚಿಕ್ಕಬಳ್ಳಾಪುರ | 49207.08 |
| 4 | ಚಿತ್ರದುರ್ಗ | 4568.38 |
| 5 | ದಾವಣಗೆರೆ | 1428.23 |
| 6 | ಕೋಲಾರ | 52001.05 |
| 7 | ರಾಮನಗರ | 45306.23 |
| 8 | ಶಿವಮೊಗ್ಗ | 695.18 |
| 9 | ತುಮಕೂರು | 9434.18 |
| 10 | ಚಾಮರಾಜನಗರ | 3158.23 |
| 11 | ಚಿಕ್ಕಮಗಳೂರು | 170.38 |
| 12 | ದಕ್ಷಿಣ ಕನ್ನಡ | 67.00 |
| 13 | ಹಾಸನ | 3974.28 |
| 14 | ಕೊಡಗು | 31.00 |
| 15 | ಮಂಡ್ಯ | 39604.15 |
| 16 | ಮೈಸೂರು | 4713.35 |
| 17 | ಉಡುಪಿ | 72.10 |
| 18 | ಬಳ್ಳಾರಿ | 3926.32 |
| 19 | ಬೀದರ್ | 1570.10 |
| 20 | ಕಲಬುರ್ಗಿ | 2217.28 |
| 21 | ಕೊಪ್ಪಳ | 1108.10 |
| 22 | ರಾಯಚೂರು | 1682.35 |
| 23 | ಯಾದಗಿರಿ | 849.03 |
| 24 | ಬಾಗಲಕೋಟೆ | 1978.03 |
| 25 | ಬೆಳಗಾವಿ | 2580.08 |
| 26 | ವಿಜಯಾಪುರ | 1586.00 |
| 27 | ಧಾರವಾಡ | 562.28 |
| 28 | ಗದಗ | 1500.15 |
| 29 | ಹಾವೇರಿ | 4864.12 |
| 30 | ಉತ್ತರ ಕನ್ನಡ | 384.38 |
| 31 | ಮೈಸೂರು ಬಿತ್ತನೆ ಪ್ರದೇಶ | 3103.08 |
| ರಾಜ್ಯದ ಒಟ್ಟು | | **262409.35** |

## ವಿಧಾನ ಪರಿಷತ್‌ನ ಪ್ರಶ್ನೆ ಸಂಖ್ಯೆ 181ಕ್ಕೆ ಅನುಬಂಧ-2

| ಕ್ರ ಸಂ | ಜಿಲ್ಲೆ | ತಾಲ್ಲೂಕು | ರೇಷ್ಮೆ ಕೃಷಿ ಕ್ಷೇತ್ರ | ಒಟ್ಟು ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|---|
| 1 | ಬೆಂಗಳೂರುನಗರ | ಆನೇಕಲ್ | 1.ಕುಂಬಾರಹಳ್ಳಿ | 20.00 |
| 2 | ಬೆಂಗಳೂರು ಗ್ರಾಮಾಂತರ | ದೇವನಹಳ್ಳಿ | 2.ಮಲ್ಲೇನಹಳ್ಳಿ | 3.12 |
| | | ದೊಡ್ಡಬಳ್ಳಾಪುರ | 3.ದೊಡ್ಡಬಳ್ಳಾಪುರ | 20.27 |
| | | ಹೊಸಕೋಟೆ | 4.ಹಿಂಡಿಗನಾಳ | 6.13 |
| | | | 5.ಸೂಲಿಬೆಲೆ | 15.0 |
| 3 | ರಾಮನಗರ | ರಾಮನಗರ | 6.ಕೆ.ಪಿ.ದೊಡ್ಡಿ | 21.34 |
| | | | 7..ಸುಗ್ಗನಹಳ್ಳಿ | 4.05 |
| | | | 8..ಕಣ್ವ | 28.14 |
| | | ಚನ್ನಪಟ್ಟಣ | 9.ಇಗ್ಗಲೂರು | 30.00 |
| 4 | ಬಾಗಲಕೋಟೆ | ಬಾಗಲಕೋಟೆ (ನವನಗರ) | 10.ಬಾಗಲಕೋಟೆ | 7.20 |
| 5 | ಬೆಳಗಾವಿ | ಅಥಣಿ | 11.ಐನಾಪುರ | 10.00 |
| | | ಬೆಳಗಾವಿ | 12.ಹಿರೇಬಾಗೇವಾಡಿ | 26.23 |
| | | ಗೋಕಾಕ್ | 13.ಗೋಕಾಕ್ | 12.00 |
| | | ಹುಕ್ಕೇರಿ | 14.ಹಿಡಕಲ್ | 14.13 |
| | | ಖಾನಾಪುರ | 15.ಖಾನಾಪುರ | 32.16 |
| | | ಪರಸಗಡ | 16.ಸವದತ್ತಿ | 31.10 |
| | | ರಾಮದುರ್ಗ | 17.ರಾಮದುರ್ಗ | 10.02 |
| | | ರಾಯಬಾಗ್ | 18.ಕಂಕಣವಾಡಿ | 13.12 |
| 6 | ಬಳ್ಳಾರಿ | ಬಳ್ಳಾರಿ | 19.ಶ್ರೀಧರಗಡ್ಡ | 20.20 |
| | | | 20.ಕೊಳಗಲ್ಲು | 37.28 |
| | | ಹೆಚ್.ಬಿ. ಹಳ್ಳಿ | 21.ಹಂಪಸಾಗರ | 22.30 |
| | | ಹೂವಿನಹಡಗಲಿ | 22.ಸೋವೇನಹಳ್ಳಿ | 19.26 |
| | | ಕೂಡ್ಲಿಗಿ | 23.ಕಂದಗಲ್ಲು | 29.54 |
| 7 | ಬಿಜಾಪುರ | ಬಿಜಾಪುರ | 24.ಸಿಂಧಗಿ | 0 |
| 8 | ಚಾಮರಾಜನಗರ | ಚಾಮರಾಜನಗರ | 25.ಕುದೇರು | 4.25 |
| | | | 26.ಚಾಮರಾಜನಗರ | 3.18 |
| | | | 27.ಉಮ್ಮತ್ತೂರು | 1.26 |
| | | | 28.ಮಂಗಲ | 9.38 |
| | | ಕೊಳ್ಳೇಗಾಲ | 29.ಕೊಳ್ಳೇಗಾಲ | 16.06 |
| | | ಯಳಂದೂರು | 30.ಬಿ.ಆರ್.ಹಿಲ್ಸ್ | 31.26 |

| | | | | |
|---|---|---|---|---|
| 9 | ಚಿಕ್ಕಮಗಳೂರು | ಕಡೂರು | 31.ಲಿಂಗ್ಲಾಪುರ | 38.01 |
| | | ತರೀಕೆರೆ | 32.ಸೊಲ್ಲಾಪುರ | 18.19 |
| 10 | ಚಿಕ್ಕಬಳ್ಳಾಪುರ | ಚಿಂತಾಮಣಿ | 33..ಮಾಡಿಕೆರೆ | 8.00 |
| | | | 34.ಏನಿಗದಲೆ | 6.16 |
| | | ಶಿಡ್ಲಘಟ್ಟ | 35.ಚೌಡಸಂದ್ರ | 25.00 |
| | | ಗೌರಿಬಿದನೂರು | 36.ಕರೇಕಲ್ಲಹಳ್ಳಿ | 20.00 |
| 11 | ಚಿತ್ರದುರ್ಗ | ಚಳ್ಳಕೆರೆ | 37.ಎನ್.ಮಹದೇವಪುರ | 17.14 |
| | | ಚಿತ್ರದುರ್ಗ | 38.ಮಾರಘಟ್ಟ | 18.00 |
| | | ಹಿರಿಯೂರು | 39.ನಂದಿಹಳ್ಳಿ | 8.28 |
| | | ಹೊಳಲ್ಕೆರೆ | 40.ಕೋಟೆಹಾಳ | 10.00 |
| | | ಮೊಳಕಾಲ್ಮೂರು | 41.ರಾಯಾಪುರ | 148.00 |
| 12 | ದಕ್ಷಿಣ ಕನ್ನಡ | ಬೆಳ್ತಂಗಡಿ | 42.ಗೇರುಕಟ್ಟೆ | 8.17 |
| | | ಪುತ್ತೂರು | 43.ಕೊಯಿಲಾ | 7.02 |
| 13 | ದಾವಣಗೆರೆ | ಚನ್ನಗಿರಿ | 44.ಬಿಆರಟಿ ಕಾಲೋನಿ | 30.00 |
| | | ಹರಪನಹಳ್ಳಿ | 45.ಮಾಚಿಹಳ್ಳಿ | 32.28 |
| 14 | ಗದಗ | ಮುಂಡರಗಿ | 46.ಮುಂಡರಗಿ | 20.10 |
| | | ರೋಣ | 47.ರೋಣ | 5.00 |
| 15 | ಹಾಸನ | ಅರಕಲಗೂಡು | 48.ರುದ್ರಪಟ್ಟಣ | 25.00 |
| | | ಅರಸೀಕೆರೆ | 49.ಜಾಜೂರು | 15.24 |
| | | ಚನ್ನರಾಯಪಟ್ಟಣ | 50.ಜಂಬೂರು | 60.00 |
| | | ಹಾಸನ | 51.ಅಂಬುಗ | 1.31 |
| | | ಹೊಳೆನರಸೀಪುರ | 52.ತಾತನಹಳ್ಳಿ | 44.33 |
| 16 | ಹಾವೇರಿ | ಹಾವೇರಿ | 53.ಹಾವೇರಿ | 1.16 |
| | | ರಾಣೇಬೆನ್ನೂರು | 54.ರಾಣೇಬೆನ್ನೂರು | 34.04 |
| 17 | ಕೊಡಗು | ಸೋಮವಾರಪೇಟೆ | 55.ಕೂಡಿಗೆ | 10.00 |
| 18 | ಕೋಲಾರ | ಬಂಗಾರುಪೇಟೆ | 56.ಕುಪ್ಪನಹಳ್ಳಿ | 0.00 |
| | | ಮುಳಬಾಗಿಲು | 57.ದೇವರಾಯಸಮುದ್ರ | 5.30 |
| | | ಶ್ರೀನಿವಾಸಪುರ | 58.ಪಣಸಮಾಕನಹಳ್ಳಿ | 10.00 |
| 19 | ಕೊಪ್ಪಳ | ಚಿಕ್ಕೊಪ್ಪ | 59.ಚಿಕ್ಕೊಪ್ಪ | 17.30 |
| | | ಕುಷ್ಠಗಿ | 60.ನರಬೆಂಚಿ | 21.11 |
| 20 | ಮಂಡ್ಯ | ಕೆ.ಆರ್.ಪೇಟೆ | 61.ಚಿಕ್ಕೋನಹಳ್ಳಿ | 34.38 |
| | | ಮದ್ದೂರು | 62.ಮದ್ದೂರು | 1.16 |
| | | ಮಂಡ್ಯ | 63.ಹೆಚ್.ಮಲ್ಲಿಗೆರೆ | 79.10 |

| | | | | |
|---|---|---|---|---|
| 21 | ಮೈಸೂರು | ಹುಣಸೂರು | 64.ಧರ್ಮಾಪುರ * | 0.00 |
| | | ನಂಜನಗೂಡು | 65.ನಂಜನಗೂಡು | 16.09 |
| | | | 66.ತಾಂಡವಪುರ | 43.17 |
| | | ಪಿರಿಯಾಪಟ್ಟಣ | 67.ಕಗ್ಗುಂಡಿ | 50.00 |
| | | ಟಿ.ನರಸೀಪುರ | 68.ಮೂಗೂರು | 4.32 |
| | | | 69.ಹೊರಳಹಳ್ಳಿ | 23.01 |
| 22 | ರಾಯಚೂರು | ಲಿಂಗಸುಗೂರು | 70.ಕನ್ನಾಪುರಹಟ್ಟಿ | 23.12 |
| | | | 71.ಕೇಸರಹಟ್ಟಿ | 65.00 |
| 23 | ತುಮಕೂರು | ಚಿಕ್ಕನಾಯಕನಹಳ್ಳಿ | 72.ಬೈರಗಾನಹಳ್ಳಿ | 12.00 |
| | | ಗುಬ್ಬಿ | 73.ಹೆರೂರು | 20.00 |
| | | ಮಧುಗಿರಿ | 74.ಕೆಂಪಾಪುರ | 67.12 |
| | | | 75.ಜೋಗಿಹಳ್ಳಿ | 19.30 |
| | | ಶಿರಾ | 76.ಶಿರಾ | 8.20 |
| | | ತಿಪಟೂರು | 77.ಹುಚ್ಚಗೊಂಡನಹಳ್ಳಿ | 26.27 |
| 24 | ಉತ್ತರ ಕನ್ನಡ | ಹಳಿಯಾಳ | 78.ಹಳಿಯಾಳ | 20.04 |
| 25 | ಯಾದಗಿರಿ | ಯಾದಗಿರಿ | 79.ಹೆಡಗಿಮುದ್ರ | 12.07 |
| | | ಸುರಪುರ | 80.ಕವಡಿಮಟ್ಟಿ | 0.05 |
| ಮೈಸೂರು ಬಿತ್ತನೆ ಪ್ರದೇಶ | | ಮಾಗಡಿ | 81.ಮಾಗಡಿ | 10.33 |
| | | | 82.ಸೋಲೂರು | 16.08 |
| | | ಕುಣಿಗಲ್ | 83.ಬಿಳಿದೇವಾಲಯ | 37.17 |
| | | | 84.ಕುಣಿಗಲ್ | 11.36 |
| | | | 85.ಸೀಗೇಹಳ್ಳಿ | 33.15 |
| | | | 86.ಹೊಸಿಗೇ ಕಾವಲ್ | 50.00 |
| | | | 87.ಕೆಂಪನಹಳ್ಳಿ | 10.00 |
| | | | 88.ಸಂತೇಮಾವತ್ತೂರು | 10.00 |
| | | ತುಮಕೂರು | 89.ಹೆಬ್ಬೂರು | 6.38 |

* ಸಿಂಧಗಿ, ಕುಪ್ಪನಹಳ್ಳಿ ಹಾಗೂ ಧರ್ಮಾಪುರ ರೇಷ್ಮೆ ಕೃಷಿ ಕ್ಷೇತ್ರಗಳ ಜಮೀನನ್ನು ಇತರೆ ಇಲಾಖೆಗಳಿಗೆ ಹಸ್ತಾಂತರಿಸಲಾಗಿದೆ.